# ಪ್ರಾರ್ಥನೆ

## ಶ್ರೀರಾಮಕೃಷ್ಣಸ್ತವಃ - ೨



ಪ್ರೇಮಾಬ್ಧಿಗಂಭೀರತರಂಗಭಂಗೈ-
ರಂದೋಲಿತೋ ಯೋ ಭಗವದ್ವಿಲೀನಃ ।
ಭಕ್ತಿರ್ವಿಶುದ್ಧಾ ಸ್ವಯಮಾವಿರಾಸೀತ್
ಪುಂವಿಗ್ರಹೋಽಹೋ ಭುವಿ ರಾಮಕೃಷ್ಣಃ ॥೫॥

ಪ್ರೇಮಸಾಗರದ ಗಂಭೀರವಾದ ಅಲೆಗಳ ಅಲ್ಲೋಲಕಲ್ಲೋಲದಲ್ಲಿದ್ದೂ ಯಾರು ಸದಾ ಭಗವಂತನಲ್ಲಿ ಲೀನರಾಗಿದ್ದರೋ, ಅಂತಹ ವಿಶುದ್ಧವಾದ ಭಕ್ತಿಯೇ ರೂಪ ತಳೆದು ನಿಂತಂತಿರುವ ಪುರುಷರೂಪಿಯೇ ಈ ಶ್ರೀರಾಮಕೃಷ್ಣರಾಗಿದ್ದಾರಲ್ಲವೆ !

ತಮದ್ಭುತಂ ಕಂಚಿದಚಿಂತ್ಯಶಕ್ತಿಂ
ವಂದೇ ಪ್ರಶಾಂತಂ ಪರಿಪೂರ್ಣಬೋಧಮ್ ।
ಜ್ಞಾನಸ್ಯ ಭಕ್ತೇಶ್ಚ ವಿಶುದ್ಧಮೂರ್ತಿಂ
ದ್ವಿಮೂರ್ತಿಮೇಕಂ ಭುವಿ ರಾಮಕೃಷ್ಣಃ ॥ ೬ ॥

ಅದ್ಭುತವಾದ, ಚಿಂತಿಸಲು ಸಾಧ್ಯವಿಲ್ಲದಷ್ಟು ಅಸಾಧಾರಣ ಶಕ್ತಿಯಿಂದ ಕೂಡಿರುವ, ಪ್ರಶಾಂತರಾದ, ಸಂಪೂರ್ಣ ಜ್ಞಾನಸ್ವರೂಪಿಯಾದ, ಜ್ಞಾನ ಹಾಗೂ ಭಕ್ತಿಯ ಸಮಾಗಮದಿಂದ ವಿಶುದ್ಧ ಮೂರ್ತಿಯಾಗಿರುವ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

ವಿಜ್ಞಾನಪೀಯೂಷನಿಮಗ್ನಮೂರ್ತಿಃ
ಪಸ್ಪರ್ಶ ಯಾನ್‌ಯಾನ್ ದಯಯಾ ಕರೇಣ ।
ತೇ ಕಾಮಿನೀಕಾಂಚನರಿಕ್ತಚಿತ್ತಾಃ
ಸದ್ಯೋ ಬಭೂವುರ್ಭುವಿ ರಾಮಕೃಷ್ಣಃ ॥ ೭ ॥

ವಿಜ್ಞಾನವೆಂಬ ಅಮೃತದಲ್ಲೇ ಸದಾ ಲೀನರಾಗಿರುವ ಶ್ರೀರಾಮಕೃಷ್ಣರು ತಮ್ಮ ಕೈಗಳಿಂದ ಸ್ಪರ್ಶಿಸಿದವರೆಲ್ಲರೂ ಕಾಮಿನೀ-ಕಾಂಚನಗಳ ಮೋಹದಿಂದ ಮುಕ್ತರಾದರು. ಅಂತಹ ಮಹಾಮಹಿಮರೇ ಭುವಿಗಿಳಿದ ಶ್ರೀರಾಮಕೃಷ್ಣರು.

ವಂದೇ ಜಗದ್ಬೀಜಮಖಂಡಮೇಕಂ
ವಂದೇ ಸುರಾಸೇವಿತಪಾದಪೀಠಮ್ ।
ವಂದೇ ಭವೇಶಂ ಭವರೋಗವೈದ್ಯಮ್
ತಮೇವ ವಂದೇ ಭುವಿ ರಾಮಕೃಷ್ಣಮ್ ॥೮॥

ಜಗತ್ತಿಗೆ ಮೂಲವೂ ಅಖಂಡವೂ ಅದ್ವಿತೀಯವೂ ಆದ ತತ್ತ್ವವೇ ಆಗಿರುವ, ದೇವತೆಗಳೂ ಪೂಜಿಸುವ ಪಾದಗಳನ್ನು ಹೊಂದಿರುವ, ಸಂಸಾರಕ್ಕೆ ಒಡೆಯನಾದ, ಭವರೋಗಕ್ಕೆ ವೈದ್ಯನಾಗಿರುವ, ಭೂಮಿಯಲ್ಲಿ ಅವತರಿಸಿದ ಶ್ರೀರಾಮಕೃಷ್ಣರಿಗೆ ನಮಸ್ಕರಿಸುತ್ತೇನೆ.

— ಪ್ರಮದದಾಸ ಮಿತ್ರ

## ಸೂಕ್ತಿಪ್ರಭ

ನಿನ್ನ ಮುಖವನ್ನು ಯಾವಾಗಲೂ ಸೂರ್ಯನ ಕಿರಣಗಳ ಕಡೆಗೇ ತಿರುಗಿಸು. ಆಗ ಎಲ್ಲ ನೆರಳೂ ನಿನ್ನನ್ನೇ ಹಿಂಬಾಲಿಸುವುವು.

— ವಾಲ್ಟ್ ವಿಟ್‌ಮನ್

ಸಾಲ, ಗಾಯ, ಬೆಂಕಿ ಹಾಗೂ ಮನಸ್ಸಿನ ಕಷಾಯಗಳು — ಇವು ಪ್ರಮಾಣದಲ್ಲಿ ಸಣ್ಣದೆಂದು ಉಪೇಕ್ಷಿಸಬಾರದು. ಏಕೆಂದರೆ, ಇವುಗಳು ಸಣ್ಣದಾದರೂ ದೊಡ್ಡದಾಗಿ ಬೆಳೆಯುವ ಸಾಮರ್ಥ್ಯವನ್ನು ಹೊಂದಿವೆ.

— ಭಗವಾನ್ ಮಹಾವೀರ

ಪ್ರತಿಯೊಂದು ವಸ್ತುವಿನಲ್ಲೂ ಸೌಂದರ್ಯವಿದೆ. ಆದರೆ ಎಲ್ಲರೂ ಅದನ್ನು ನೋಡಲಾರರು.

— ಕನ್‌ಫ್ಯೂಶಿಯಸ್

ಜಗತ್ತಿನ ಅತ್ಯಂತ ಸುಂದರ ವಸ್ತುಗಳನ್ನು ನೋಡಲಾಗದು, ಸ್ಪರ್ಶಿಸಲಾಗದು — ಅವುಗಳನ್ನು ಹೃದಯದಲ್ಲಿ ಭಾವಿಸಬೇಕು, ಅಷ್ಟೆ.

— ಹೆಲೆನ್ ಕೆಲರ್

ನೀನು ಉತ್ತಮಗೊಳಿಸಬಹುದಾದ, ಈ ಪ್ರಪಂಚದ ಒಂದೇ ಒಂದು ತುದಿಯೆಂದರೆ — ಅದು ನಿನ್ನ ಆತ್ಮ ಮಾತ್ರವೇ.

— ಆಲ್ಡಸ್ ಹಕ್ಸ್‌ಲೆ

ಶ್ರದ್ಧೆಯಿಂದಲೇ ಧರ್ಮವು ಧರಿಸಲ್ಪಟ್ಟಿದೆ. ಬೇಕಾದಷ್ಟು ಹಣವಿದ್ದರೂ ಧರ್ಮವನ್ನು ಸಂಪಾದಿಸಲಾಗದು. ಹಣವೇನೂ ಇಲ್ಲದಿದ್ದರೂ, ಋಷಿಗಳು ಶ್ರದ್ಧೆಯಿಂದಲೇ ಸದ್ಗತಿಯನ್ನು ಪಡೆದರು.

— ಗರುಡಪುರಾಣ